ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಯೋಜನೆಯಡಿ ಪ್ರತಿ ಸಾಲಿನಲ್ಲಿ ಕಾಮಗಾರಿಗಳನ್ನು ಹಂತಹಂತವಾಗಿ ಮಂಜೂರು ಮಾಡಲಾಗುತ್ತಿದ್ದು ಇಲಾಖಾ ನಿಯಮಾವಳಿ ಅನುಸರಿಸಿ ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಈ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಪ್ರಗತಿ ಕುಂಠಿತವಾಗಿದೆ.

ಆ) ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಕುಂಠಿತ ಪ್ರಗತಿ ನೀಡುತ್ತಿರುವ ಗುತ್ತಿಗೆದಾರರಿಗೆ ನಿಯಮಾವಳಿಯಂತೆ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ತಿಪಟೂರು ನಗರದ ರಸ್ತೆಗಳ ದುರಸ್ಥಿ

2289 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಿಪಟೂರು ನಗರದಲ್ಲಿ ಮಳೆಯ ಅತಿವೃಷ್ಟಿಯಿಂದ ಎಲ್ಲಾ ರಸ್ತೆಗಳು ಹಾಳಾಗಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹಲವೆಡೆ ರಸ್ತೆ ಹಾಳಾಗಿದ್ದು, ಗಮನಕ್ಕೆ ಬಂದಿದೆ.

ಆ) ವಾರ್ಷಿಕ ನಿರ್ವಹಣೆಯ ಲಭ್ಯವಿರುವ ಅನುದಾನದಲ್ಲಿ ದುರಸ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಆರ್ಥಿಕ ಮಿತವ್ಯಯ

2289A - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಆರ್ಥಿಕ ಮಿತವ್ಯಯ ಯಾವಾಗ ಜಾರಿ ಬಂದಿದೆ ಮತ್ತು ಈಗಲೂ ಸಹ ಜಾರಿಯಲ್ಲಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಆ) *ಯಾವ ಯಾವ ಇಲಾಖೆಗಳಲ್ಲಿ ಆರ್ಥಿಕ ಮಿತವ್ಯಯ ಜಾರಿಯಲ್ಲಿದೆ ಮತ್ತು ಯಾವ ಯಾವ ಇಲಾಖೆಗಳಲ್ಲಿ ಅದನ್ನು ಮನ್ನಾ ಮಾಡಲಾಗಿದೆ.*

ಇ) *ಶಿಕ್ಷಣ ಇಲಾಖೆಯು ಭೋಧಕೇತರರಿಗೆ ಆರ್ಥಿಕ ಮಿತವ್ಯಯ ಆದೇಶವನ್ನು ರದ್ದುಪಡಿಸಲು ಸರ್ಕಾರ ತೀರ್ಮಾನಿಸಿದೆಯೆ, 1-6-92ರೊಳಗೆ ನೇಮಕಗೊಂಡು ಅನುಮೋದನೆಯಿಂದ ಭೋಧಕೇತರರಿಗೆ ಇದನ್ನು ಮನ್ನಾ ಮಾಡಿ ಸಂಬಳ ವೇತನ ನೀಡಲಾಗುವುದೇ?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ಆರ್ಥಿಕ ಮಿತವ್ಯಯ ಆದೇಶವು ದಿ: 10-11-87ರಿಂದ ಜಾರಿಗೆ ಬಂದಿದ್ದು, ಈಗಲೂ ಸಹ ಜಾರಿಯಲ್ಲಿದೆ. ಇದು ಅಭಿವೃದ್ಧಿಯೇತರ ಖರ್ಚನ್ನು ಹತೋಟಿಯಲ್ಲಿಡಲು ಮಾಡಲಾಗಿದೆ.

ಆ) ಆರ್ಥಿಕ ಮಿತವ್ಯಯ ಆದೇಶವು ಎಲ್ಲಾ ಇಲಾಖೆಗಳಲ್ಲಿ ಜಾರಿಯಲ್ಲಿದೆ.

ಆದರೆ ಈ ಕೆಳಗೆ ನಮೂದಿಸಿರುವ ಇಲಾಖೆಗಳಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ ಕೆಲವೊಂದು ಅತ್ಯಾವಶ್ಯಕ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ.

1. ಶಿಕ್ಷಣ ಇಲಾಖೆ
2. ಕಂದಾಯ ಇಲಾಖೆ
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
4. ಪಶು ಸಂಗೋಪನೆ, ಮೀನುಗಾರಿಗೆ ಇಲಾಖೆ
5. ಅರಣ್ಯ ಇಲಾಖೆ
6. ಸಮಾಜ ಕಲ್ಯಾಣ ಇಲಾಖೆ
7. ಕಾರ್ಮಿಕ ಇಲಾಖೆ

ಇ) ಇಲ್ಲ. ಆದರೆ ಆಡಳಿತ ಇಲಾಖೆಯು ಈ ಬಗ್ಗೆ ಸಲ್ಲಿಸಿರುವ ಈ ಪ್ರಸ್ತಾವನೆಯಲ್ಲಿ 1116 ಬೋಧಕೇತರ ಹುದ್ದೆಗಳಿದ್ದು, ಸದರಿ ಹುದ್ದೆಗಳಿಗೆ ತಗಲುವ ರೂ.333.00 ಲಕ್ಷಗಳನ್ನು ಯೋಜನೆಯಲ್ಲಿ ಹೆಚ್ಚುರಿಯಾಗಿ ಒದಗಿಸಲು ಆಡಳಿತ ಇಲಾಖೆಯು ಕೋರಿರುವುದರಿಂದ ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಮಂಡಿಸುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.

ಆಳ ಸಾಗರ ಮೀನುಗಾರಿಕೆ

2290- ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಕರಾವಳಿಯಲ್ಲಿ ವಿದೇಶಿ ನೌಕೆಗಳಿಗೆ ಆಳ ಸಾಗರ ಮೀನುಗಾರಿಕೆ ನಿಷೇಧದ ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಆ) *'ಕರಾವಳಿ ಪಡೆ ನಿರ್ಮಿಸುವ' ಯೋಜನೆ ಸರ್ಕಾರದ ಮುಂದಿದೆಯೇ?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ರಾಜ್ಯದ ಕರಾವಳಿಯಲ್ಲಿ ವಿದೇಶಿ ನೌಕೆಗಳಿಗೆ ಆಳ ಸಾಗರ ಮೀನುಗಾರಿಕೆ ನಿಷೇದ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿರುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರದ ಬೇಡಿಕೆ ಮೇರೆಗೆ ಕೇಂದ್ರ ಸರ್ಕಾರವು ಮಳೆಗಾಲದಲ್ಲಿ ಕರ್ನಾಟಕ ಕಡಲ ಪ್ರದೇಶದ ಅನನ್ಯ ಆರ್ಥಿಕ ವಲಯದಲ್ಲಿ (ಇ.ಇ.ಜಡ್)